**ಎರಡನೇಯ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರ ನ್ಯಾಯಾಲಯ ,**
**ಉಡುಪಿ ಜಿಲ್ಲೆ , ಉಡುಪಿ**

**ಸೆಷನ್ಸ್ ಕೇಸ್ ನಂಃ 26/2017 ಫ್ರಾ.ಸಾ.26**

**ಚಾ.ಸಾ. 23**

| | | |
|---|---|---|
| ಸಾಕ್ಷಿದಾರರ ಹೆಸರು | - | ಅಮೀರ್ ಸೋಹೆಲ್ |
| ತಂದೆಯ ಹೆಸರು | - | ಸುಲೆಮಾನ ಕೆ |
| ವಯಸ್ಸು | - | 33 ವರ್ಷ |
| ಉದ್ಯೋಗ | - | ಖಾಸಗಿ ಉದ್ಯೋಗ |
| ವಿಳಾಸ | - | ಉಡುಪಿ. |

ದಿನಾಂಕಃ 09-01-2025 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.

**ಮುಖ್ಯ ವಿಚಾರಣೆಃ ಸರಕಾರಿ ಅಭಿಯೋಜಕರಿಂದಃ**

ಚಾ.ಸಾ.24 ನನ್ನ ಮಾವನ ಮಗ. ರಿಜ್ವಾನ್ ನನ್ನ ಸ್ನೇಹಿತ. ಆತ ಕಾರು ಸಂ. K.A 20 Z 7586 ಇದರ ಮಾಲೀಕ. ಸದ್ರಿ ಕಾರನ್ನು ನನ್ನ ಸಮಕ್ಷಮ ಪೊಲೀಸರು ಅಮಾನತ್ತುಪಡಿಸಿಕೊಂಡಿಲ್ಲ. ಆದರೆ ಸುಮಾರು 7 ವರ್ಷಗಳ ಹಿಂದೆ ಪೊಲಪೀಸರು 2 ದಾಖಲೆಗಳಿಗೆ ನನ್ನ ಸಹಿ ಪಡೆದುಕೊಂಡಿರುತ್ತಾರೆ. ವಿಧಿವಿಜ್ಞಾನ ಪ್ರಯೋಗಾಲಯದ ಅಧಿಕಾರಿಗಳು ನನ್ನ ಸಮಕ್ಷಮದಲ್ಲಿ ಯಾವುದೇ ಸ್ವತ್ತನು ಸದ್ರಿ ಕಾರಿನಿಂದ ಅಮಾನತ್ತುಪಡಿಸಿಕೊಂಡಿರುವುದಿಲ್ಲ. ಈಗ ತೋರಿಸಿದ 2 ಸ್ವತ್ತು ಸ್ವಾಧೀನತಾ ಮಜರಿನಲ್ಲಿ ಇರುವ ಸಹಿಯನ್ನು ಸಾಕ್ಷಿ ನೋಡಿ ಗುರುತಿಸಿರುತ್ತಾರೆ. ನಿ.ಪಿ 31 ರಲ್ಲಿ ಸಹಿ ಗುರುತಿಸಿದ್ದು ಅದನ್ನು ನಿ.ಪಿ 31(ಬಿ) ಎಂದು ಗುರುತಿಸಲಾಯಿತು. ಈಗ ತೋರಿಸಿದ ಸ್ವತ್ತು ಸ್ವಾಧೀನತಾ ಮಹಜರಿನಲ್ಲಿರುವ ಸಹಿಯನ್ನು ಸಾಕ್ಷಿಯು ನೋಡಿ ಗುರುತಿಸಿದ್ದು ಅದನ್ನು ನಿ.ಪಿ 71 ಎಂದು , ಸಾಕ್ಷಿಯ ಸಹಿಯನ್ನು ನಿ.ಪಿ 71(ಎ) ಎಂದು ಗುರುತಿಸಲಾಯಿತು. ನಿ.ಪಿ 31 ಮತ್ತು 71 ರಲ್ಲಿ ಬರೆದಿರುವ ಅಂಶಗಳು ಗೊತ್ತಿಲ್ಲ.

**( ಈ ಹಂತದಲ್ಲಿ ಅಭಿಯೋಜಕರ ವಿನಂತಿಯ ಮೇರೆಗೆ ಈ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟಿ ಸವಾಲು ಮಾಡಲು ಅಭಿಯೋಜಕರಿಗೆ ಅನುಮತಿ ಕೊಡಲಾಯಿತು)**

**ಪಾಟಿ ಸವಾಲುಃ ಸರಕಾರಿ ಅಭಿಯೋಜಕರಿಂದ**

1. ದಿನಾಂಕ 07.01.2017 ರಂದು ಹಿರಿಯಡ್ಕ ಪೊಲೀಸ ಠಾಣಾ ಆವರಣದಲ್ಲಿ ನನ್ನ ಸ್ನೇಹಿತ ರಿಜವಾನ್ ಆತನಿಗೆ ಸೇರಿದ K.A 20 Z 7586 ಕಾರನ್ನು ಈ ಪ್ರಕರಣದ ತನಿಖೆಗಾಗಿ ಮಧ್ಯಾಹ್ನ 2

ಗಂಟೆಗೆ ಹಾಜರುಪಡಿಸಿದ್ದು, ಷದ್ರಿ ಕಾರನ್ನು ಪರಿಶೀಲಿಸಿ ನೋಡಲಾಗಿ ಕಾರಿನ ಡಿಕ್ಕಿಯಲ್ಲಿ ಕಪ್ಪು ಬಣ್ಣದ ಮ್ಯಾಟ್ ತುಂಡುಗಳು ಕಂಡುಬಂದಿದ್ದು, ಷದ್ರಿ ಮ್ಯಾಟ್‌ನಲ್ಲಿ ಅಲ್ಲಲ್ಲಿ ರಕ್ತದ ಕಲೆಗಳು ಕಂಡುಬಂದಿದ್ದು, ಷದ್ರಿ ಕಾರನ್ನು ನಮ್ಮ ಸಮಕ್ಷಮದಲ್ಲಿ ಅಮಾನತ್ತುಪಡಿಸಿಕೊಂಡು ನಿ.ಪಿ31 ರಂತೆ ಮಹಜರು ಬರೆದಿರುತ್ತಾರೆ ಮತ್ತು ಸ್ಥಳದಲ್ಲಿ ನನ್ನ ಸಹಿಯನ್ನು ಪಡೆದಿದ್ದಾರೆ ಎಂದರೆ ಸರಿಯಲ್ಲ. ಈಗ ತೋರಿಸಿದ ಛಾಯಚಿತ್ರದಲ್ಲಿರುವ ಕಾರನ್ನು ಸಾಕ್ಷಿ ನೋಡಿ ಗುರುತಿಸಿದ್ದು, ಅದು ತನ್ನ ಸ್ನೇಹಿತ ರಿಜವಾನ್ ಇವರಿಗೆ ಸೇರಿದ ಕಾರು ಎಂದು ನುಡಿಯುತ್ತಾರೆ. ಸದಿರ ಕಾರಿನ ಛಾಯಾಚಿತ್ರವನ್ನು ಈಗಾಗಲೇ ಎಮ್ ಒ 1 ಎಂದು ಗುರುತಿಸಲಾಗಿದೆ.

2. ಅದೇ ದಿನ ಸಂಜೆ 4.30 ರಿಂದ 5.15 ಗಂಟೆಯ ಅವಧಿಯಲ್ಲಿ ಪೆರ್ಣಂಕಿಲ ಗ್ರಾಮದ ಮೂಡುಗುಡ್ಡೆ ಎಂಬಲ್ಲಿಯ ಶವ ಸುಟ್ಟ ಸ್ಥಳದ ಪರಿಶೀಲನೆಗೆ ವಿಧಿವಿಜ್ಞಾನ ಪ್ರಯೋಗಾಲಯದ ಅಧಿಕಾರಿಗಳು ಸಂಗ್ರಹಿಸಿ ನಂತರ ಅವರು ಠಾಣಾ ಆವರಣಕ್ಕೆ ಬಂದು ರಿಜವಾನ ಈತನಿಗೆ ಸೇರಿದ K.A 20 Z 7586 ಕಾರನ್ನು ತನಿಖಾಧಿಕಾರಿಯವರ ಮನವಿಯ ಮೇರೆಗೆ ಪರಶೀಲಿಸಿ ಕಾರಿನ ಡಿಕ್ಕಿಯಲ್ಲಿದ್ದ ರಕ್ತದ ಕಲೆಗಳನ್ನು 7 ಕವರಗಳಲ್ಲಿ ಸಂಗ್ರಹಿಸಿದ್ದು, ಈ ಸಮಯದಲ್ಲಿ ನಾನು ಸ್ಥಳದಲ್ಲಿ ಹಾಜರಿದ್ದು, ಅವುಗಳನ್ನು ನಮ್ಮ ಸಮಕ್ಷಮದಲ್ಲಿ ಅಮಾನತ್ತುಪಡಿಸಿಕೊಂಡು ನಿ.ಪಿ 71 ರಂತೆ ಮಹಜರು ಬರೆದಿದ್ದಾರೆ ಎಂದರೆ ಸರಿಯಲ್ಲ. ಆರೋಪಿಗೆ ಸಹಾಯ ಮಾಡುವ ಉದ್ದೇಶದಿಂದ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**<u>ಆರೋಪಿತರ ಪರವಾಗಿ ಪಾಟೀ ಸವಾಲುಃ</u> ಇಲ್ಲ**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು)

ಓದಿ ಹೇಳಲಾಗಿ ಕೇಳಿ ಸರಿ ಇದೆ ಎಂದು ಒಪ್ಪಿದರು.

ಎರಡನೇಯ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಉಡುಪಿ.